ಕರ್ನಾಟಕ ವಿಧಾನ ಸಭೆ, ಸಂಶೋಧನಾ ಹಾಗೂ ಉಲ್ಲೇಖನಾ ಶಾಖೆ

KARNATAKA LEGISLATIVE ASSEMBLY RESEARCH AND REFERENCE BRANCH

ಪತ್ರಿಕಾ ತುಣುಕುಗಳು

PAPER CLIPPINGS

ಇಲಾಖೆ / ವಿಷಯ: DEPARTMENT / SUBJECT: ಅಂತರ ರಾಷ್ಟ್ರೀಯ

ಪತ್ರಿಕೆಯ ಹೆಸರು : NAME OF THE NEWS PAPER : ವಿಜಯವಾಣಿ ದಿನಾಂಕ : DATE : 17/08/2019

## ಕಾಶ್ಮೀರ ವಿಚಾರದಲ್ಲಿ ನಿಲುವು ಬದಲಿಲ್ಲ ಎಂದ ವಿಶ್ವಸಂಸ್ಥೆ

# ಪಾಕ್‌ಗೆ ಮುಖಭಂಗ

ವಿ.ವಾ. 17-8-19

**ನವದೆಹಲಿ:** ಜಮ್ಮು-ಕಾಶ್ಮೀರ ವಿಚಾರವನ್ನು ಜಾಗತಿಕ ಮಟ್ಟದಲ್ಲಿ ಪ್ರಸ್ತಾಪಿಸಲು ಹರಸಾಹಸ ಮಾಡುತ್ತಿರುವ ಪಾಕಿಸ್ತಾನಕ್ಕೆ ಹಾಗೂ ಇದನ್ನು ಬೆಂಬಲಿಸುತ್ತಿರುವ ಚೀನಾಕ್ಕೆ ಶುಕ್ರವಾರ ಭಾರಿ ಮುಖಭಂಗವಾಗಿದೆ.

ವಿಶ್ವಸಂಸ್ಥೆ ಭದ್ರತಾ ಮಂಡಳಿ (ಯುಎನ್‌ಎಸ್‌ಸಿ) ಸಭೆಯಲ್ಲಿ ಕಾಶ್ಮೀರ ಕುರಿತು ಅನೌಪಚಾರಿಕ ಸಭೆ ನಡೆದಿದ್ದು, ಭಾರತದ ವಿರುದ್ಧ ಖಂಡನಾ ನಿರ್ಣಯ ಅಂಗೀಕರಿಸಲು ಅಥವಾ ನಿಲುವಳಿ ಅಂಗೀಕರಿಸಲು ಸಭೆ ನಿರಾಕರಿಸಿದೆ. ಇದರಿಂದ ಅಂತಾರಾಷ್ಟ್ರೀಯ ಮಟ್ಟದಲ್ಲಿ ಮತ್ತೊಮ್ಮೆ ಭಾರತ ಮೇಲುಗೈ ಸಾಧಿಸಿದ್ದು, ಪಾಕಿಸ್ತಾನದ ಮತ್ತೊಂದು ಯತ್ನ ವಿಫಲವಾಗಿದೆ. ಜಮ್ಮು- ಕಾಶ್ಮೀರ ವಿಶೇಷ ಸ್ಥಾನಮಾನ ರದ್ದತಿ ಹಾಗೂ ರಾಜ್ಯ ಪುನಾರಚನೆ ಕುರಿತು ಯಾವುದೇ ಸ್ಪಷ್ಟ ನಿರ್ಧಾರ ಪ್ರಕಟಿಸದ ವಿಶ್ವಸಂಸ್ಥೆ, ತನ್ನ ಹಿಂದಿನ ನಿಲುವಿಗೆ ಬದ್ಧ ಎಂದಿದೆ. ವಿವಾದವನ್ನು ದ್ವಿಪಕ್ಷೀಯ ಮಾತುಕತೆ ಮೂಲಕ ಪರಿಹರಿಸಿಕೊಳ್ಳುವಂತೆ ಸಲಹೆ ನೀಡಿದೆ. ಈ ಮೂಲಕ ಕಾಶ್ಮೀರ ವಿಚಾರದಲ್ಲಿ ಮಧ್ಯಪ್ರವೇಶಿಸುವುದಿಲ್ಲ ಎಂದು ಪರೋಕ್ಷವಾಗಿ ತಿಳಿಸಿದೆ.

» **ಭಾರತಕ್ಕೆ ಮತ್ತೊಮ್ಮೆ ಮೇಲುಗೈ**

**ಪಾಕ್, ಚೀನಾ ಜಂಟಿ ಯತ್ನ:** ಕಾಶ್ಮೀರದ ವಿಶೇಷ ಸ್ಥಾನಮಾನ ರದ್ದುಗೊಳಿಸಿರುವ ಕೇಂದ್ರ ಸರ್ಕಾರದ ವಿರುದ್ಧ ಜಾಗತಿಕ ಮಟ್ಟದಲ್ಲಿ ಅಭಿಪ್ರಾಯ ಮೂಡಿಸುವ ಉದ್ದೇಶದಿಂದ ವಿಶ್ವಸಂಸ್ಥೆಯ ಭದ್ರತಾ ಮಂಡಳಿ ಸಭೆಯಲ್ಲಿ ಈ ವಿಚಾರ ಪ್ರಸ್ತಾಪಿಸಲು ಪಾಕಿಸ್ತಾನ, ಚೀನಾ ಯತ್ನಿಸಿದ್ದವು. ಆದರೆ ಈ ಇದನ್ನು ಸಾಮಾನ್ಯ ಸಭೆಯಲ್ಲಿ ಕೈಗೆತ್ತಿಕೊಳ್ಳಲು ನಿರಾಕರಿಸಿದ್ದ ವಿಶ್ವಸಂಸ್ಥೆಯ ಭದ್ರತಾ ಮಂಡಳಿ, ಅನೌಪಚಾರಿಕವಾಗಿ ಚರ್ಚಿಸುವುದಾಗಿ ಹೇಳಿತ್ತು. ಕಾಶ್ಮೀರ ಕುರಿತು ಮೊದಲು ಚೀನಾ ಪ್ರಸ್ತಾವನೆ ಮಂಡಿಸಿತು. ಆದರೆ ರಷ್ಯಾ, ಅಮೆರಿಕ ಸಹಿತ ಹಲವು ರಾಷ್ಟ್ರಗಳು ಭಾರತದ ಪರ ನಿಲುವು ವ್ಯಕ್ತ ಪಡಿಸಿದ ಕಾರಣ, ಪಾಕಿಸ್ತಾನದ ಯತ್ನ ವಿಫಲವಾಯಿತು ಎನ್ನಲಾಗಿದೆ. ಚರ್ಚೆಯ ಸಂದರ್ಭದಲ್ಲಿ ತನ್ನ ಪ್ರತಿನಿಧಿ ವಾದ ಮಂಡಿಸಲು ಅವಕಾಶ ನೀಡಬೇಕೆಂದು ಪಾಕ್ ಕೋರಿತ್ತು. ನಿಯಮದ ಪ್ರಕಾರ ಇದಕ್ಕೆ 15 ರಾಷ್ಟ್ರಗಳ ಪೈಕಿ 9 ರಾಷ್ಟ್ರಗಳು ಸಮ್ಮತಿ ಸೂಚಿಸಬೇಕು. ಚೀನಾ, ಪೋಲೆಂಡ್ ಇದಕ್ಕೆ ಸಹಮತ ವ್ಯಕ್ತಪಡಿಸಿದರೂ, ಇತರ ರಾಷ್ಟ್ರಗಳು ವಿರೋಧ ವ್ಯಕ್ತಪಡಿಸಿದವು.



### 50 ವರ್ಷಗಳ ಬಳಿಕ ಚರ್ಚೆ

50 ವರ್ಷಗಳ ಹಿಂದೆ ಕಾಶ್ಮೀರ ವಿಚಾರವಾಗಿ ಯುಎನ್‌ಎಸ್‌ಸಿಯಲ್ಲಿ ಚರ್ಚೆ ನಡೆದಿತ್ತು. 1965ರಲ್ಲಿ ಕೊನೆಯ ಬಾರಿಗೆ ಕಾಶ್ಮೀರ ವಿಚಾರದಲ್ಲಿ ಅಧಿಕೃತ ಸಭೆ ನಡೆಸಲಾಗಿತ್ತು. ನಂತರ 1971ರಲ್ಲಿ ಅನೌಪಚಾರಿಕ ಚರ್ಚೆ ನಡೆದಿತ್ತು.

### ಭಾರತದ ಸಮರ್ಥನೆ

ಜಮ್ಮು-ಕಾಶ್ಮೀರಕ್ಕೆ ನೀಡಲಾಗಿದ್ದ ವಿಶೇಷ ಸ್ಥಾನಮಾನ ರದ್ದುಪಡಿಸಿರುವ ನಿರ್ಧಾರವನ್ನು ವಿಶ್ವಸಂಸ್ಥೆಯ ಭಾರತದ ಪ್ರತಿನಿಧಿ ಸೈಯದ್ ಅಕ್ಬರುದ್ದೀನ್ ಸಮರ್ಥಿಸಿಕೊಂಡಿದ್ದಾರೆ. ಜತೆಗೆ ಉಗ್ರರಿಗೆ ಪಾಕಿಸ್ತಾನ ಪ್ರಚೋದನೆ ನೀಡುತ್ತಿರುವುದನ್ನು ಮತ್ತೊಮ್ಮೆ ಉಲ್ಲೇಖಿಸಿದ್ದಾರೆ.



ಕಾಶ್ಮೀರ ವಿಚಾರ ಭಾರತದ ಆಂತರಿಕ ವಿಷಯ. ಇದಕ್ಕೂ ಪಾಕಿಸ್ತಾನಕ್ಕೂ ಸಂಬಂಧ ಇಲ್ಲ. ಕಾಶ್ಮೀರ ಹಾಗೂ ಲಡಾಖ್ ಜನರ ಹಿತದೃಷ್ಟಿಯಿಂದ ಈ ನಿರ್ಧಾರ ಕೈಗೊಳ್ಳಲಾಗಿದೆ ಎಂದಿದ್ದಾರೆ. ಜಮ್ಮು-ಕಾಶ್ಮೀರದಲ್ಲಿ ಶಾಂತಿ ಕಾಪಾಡುವ ಉದ್ದೇಶದಿಂದ ಭದ್ರತೆ ಹೆಚ್ಚಿಸಲಾಗಿದೆ. ಆದರೆ ಇಲ್ಲಿ ಹಿಂಸಾಚಾರ ನಡೆಯುತ್ತಿದೆ ಎಂದು ಪಾಕಿಸ್ತಾನ ಆರೋಪ ಮಾಡುತ್ತಿದೆ. ಈ ವಿಚಾರವನ್ನು ವೈಭವೀಕರಿಸಲು ಪಾಕ್ ಯತ್ನಿಸುತ್ತಿದೆ. ಕಾಶ್ಮೀರದಲ್ಲಿ ಭಯೋತ್ಪಾದನೆ ನಿಯಂತ್ರಿಸಲು ಭಾರತ ಕ್ರಮ ಕೈಗೊಂಡಿದೆ ಎಂದು ಅಕ್ಬರುದ್ದೀನ್ ಹೇಳಿದ್ದಾರೆ. ಈ ಸಭೆ ಅನೌಪಚಾರಿಕವಾಗಿರುವ ಕಾರಣ ಅಧಿಕೃತ ಘೋಷಣೆ ಮಾಡಲಾಗುವುದಿಲ್ಲ. ಆದರೆ ಕಾಶ್ಮೀರ ವಿಚಾರವಾಗಿ ವಿಸ್ತೃತ ಚರ್ಚೆ ಮಾಡಬೇಕು ಎಂಬ ಪಾಕಿಸ್ತಾನ, ಚೀನಾ ವಾದವನ್ನು ಸಭೆ ತಿರಸ್ಕರಿಸಿದೆ ಎಂದು ಅವರು ಮಾಹಿತಿ ನೀಡಿದ್ದಾರೆ.

### ಟ್ರಂಪ್‌ಗೆ ಇಮ್ರಾನ್ ಕರೆ

ಯುಎನ್‌ಎಸ್‌ಸಿ ಸಭೆ ಆರಂಭಕ್ಕೂ ಮೊದಲೇ ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್‌ಗೆ ಕರೆ ಮಾಡಿದ್ದ ಪಾಕ್ ಪ್ರಧಾನಿ ಇಮ್ರಾನ್ ಖಾನ್, ಕಾಶ್ಮೀರ ವಿಚಾರದಲ್ಲಿ ಬೆಂಬಲಕ್ಕೆ ನಿಲ್ಲುವಂತೆ ಮನವಿ ಮಾಡಿದ್ದರು ಎನ್ನಲಾಗಿದೆ. ಆದರೆ ಅಮೆರಿಕ ಇದಕ್ಕೆ ಮನ್ನಣೆ ನೀಡಿಲ್ಲ. ಸಭೆಯಲ್ಲಿ ಚರ್ಚೆಯಾದ ಅಂಶಗಳೇನು ಎನ್ನುವುದು ಸಂಪೂರ್ಣ ಬಹಿರಂಗ ಆಗಿಲ್ಲ.

### ಭಾರತಕ್ಕೆ ರಷ್ಯಾ ಬೆಂಬಲ

ಅನೌಪಚಾರಿಕ ಸಭೆಯಲ್ಲಿ ಭಾರತಕ್ಕೆ ರಷ್ಯಾ ಸಾಥ್ ನೀಡಿದೆ. ಕಾಶ್ಮೀರ ವಿಚಾರದಲ್ಲಿ ಭಾರತದ ನಿರ್ಧಾರ ಆಂತರಿಕವಾದುದು ಎಂದು ಈ ಹಿಂದೆಯೇ ರಷ್ಯಾ ಹೇಳಿತ್ತು. 'ಭಾರತ ಮತ್ತು ಪಾಕಿಸ್ತಾನದೊಂದಿಗೆ ಉತ್ತಮ ಬಾಂಧವ್ಯ ಇದೆ. ಮುಂದಿನ ದಿನಗಳಲ್ಲೂ ಇದು ಮುಂದುವರಿಯಲಿದೆ. ದ್ವಿಪಕ್ಷೀಯ ಮಾತುಕತೆಗಳ ಮೂಲಕ ವಿವಾದ ಬಗೆಹರಿಸಿಕೊಳ್ಳಬೇಕು' ಎಂದು ಸಭೆ ಬಳಿಕ ರಷ್ಯಾ ಪುನರುಚ್ಚರಿಸಿದೆ. ಸಭೆಯಲ್ಲಿ ಪಾಕಿಸ್ತಾನದ ಬೆಂಬಲಕ್ಕೆ ನಿಂತಿದ್ದ ಚೀನಾ, 'ಎರಡೂ ರಾಷ್ಟ್ರಗಳು ಶಾಂತಿ ಸುವ್ಯವಸ್ಥೆ ಕಾಪಾಡಬೇಕು. ಮಾತುಕತೆ ಮೂಲಕ ಸಮಸ್ಯೆ ಬಗೆಹರಿಸಿಕೊಳ್ಳಬೇಕು' ಎಂದು ಹೇಳಿದೆ.

4